

ಔಷಧಿ ಕೆಲಸದವಳಿಗೋಸ್ಕರ ಇರಬಹುದೆ? ರವಿ ಅವಳಿಗೆ ಮೋಸಮಾಡಿರಬಹುದೆ? ಯುವತಿಯರನ್ನ ಮನೆ ಕೆಲಸಕ್ಕೆ ನೇಮಿಸಬಾರದೆಂದು ಪಕ್ಕದ ಮನೆಯ ಪಾಪಿಯಮ್ಮ ಆಗಾಗ ಹೇಳುತ್ತಿದ್ದುದನ್ನು ಜ್ಞಾಪಿಸಿಕೊಂಡರು ರಾಮನ್ ಕುಟ್ಟಿ ನಾಯರ್.

''ನಿಮ್ಮ ನಡವಳಿಕೆಯೆನೋ ಚೆನ್ನಾಗಿದೆ. ಆದರೆ, ಉಳಿದವರ ನಡವಳಿಕೆ ಹೇಗಿದೆಯೆಂದು ಯಾರಿಗೆ ಗೊತ್ತು? ಒಂಟಿಯಾಗಿ ಮನೆಯಲ್ಲಿ ಬಿಟ್ಟುಹೋಗುವುದು ಅಪಾಯಕ್ಕೆ ಆಹ್ವಾನ ನೀಡಿದಂತೆ. ನೀವು ಮತ್ತು ರಮಣಿ ದೇವಸ್ಥಾನಕ್ಕೆ ಹೋದರೆ ಸಾಕಲ್ಲವೆ ಗಂಡಸರಿಗೆ ಅವಳನ್ನ ವಿಚಾರಿಸಿಕೊಂಡು ಬರಲು. ಕೊನೆಗೆ ಕೆಟ್ಟ ಹೆಸರು ಬರೋದು ನಿಮಗೆ'' ಪಾಪಿಯಮ್ಮ ಹೇಳಿದರು.

ಬಿತ್ತನೆ ಬೀಜ ಸಿಕ್ಕಿದ ಕೂಡಲೇ ರಾಮನ್ ಕುಟ್ಟಿ ನಾಯರ್ ಪುನಃ ಟ್ಯಾಕ್ಸಿ ಹತ್ತಿದರು. ನಡೆಯುವಷ್ಟು ದೂರವೇ ಇರುವುದೆಂದು ಅವರಿಗೆ ಗೊತ್ತಿತ್ತು. ಆದರೂ ಆದಷ್ಟು ಬೇಗನೆ ಮನೆ ತಲುಪಿ ಕೆಲಸದವಳನ್ನು ತೆಗೆದುಹಾಕಬೇಕೆಂಬ ಹಪಾಹಪಿ ಅವರನ್ನು ತೀವ್ರವಾಗಿ ಕಾಡುತ್ತಿತ್ತು. ರಾಮನ್ ಕುಟ್ಟಿ ನಾಯರ್ ಶ್ರೀಮಂತನಲ್ಲದಿದ್ದರೂ ಪರೋಪಕಾರಿ. ಎಲ್ಲರಿಗೂ ಬೇಕಾದವರಾಗಿ ನಲ್ವತ್ತೆಂಟು ವರ್ಷಗಳ ಕಾಲ ಊರಿನಲ್ಲಿಯೇ ಕಳೆದಿದ್ದರು. ಇನ್ನು ಕೆಟ್ಟ ಹೆಸರು ಸಂಪಾದಿಸಲು ತಾನು ಸಿದ್ಧನಿಲ್ಲ. ಇನ್ನುಮುಂದೆ ಅಡುಗೆ ಕೆಲಸಾನ ರಮಣಿಯೇ ಮಾಡಲಿ. ಇಸ್ಪೀಟ್ ಆಡುವುದಕ್ಕಿಂತಲೂ ವಾಸಿ ಅಡುಗೆ ಕೆಲಸ. ಹೆಂಗಸರು ಇಸ್ಪೀಟ್ ಆಡಿದರೆ ಕುಟುಂಬ ಸರ್ವನಾಶವಾಗುತ್ತದಂತೆ. ತನಗೆ ಅದು ತಿಳಿಯದಿರುವ ವಿಷಯವೇನೂ ಅಲ್ಲ. ಆದರೆ, ರಮಣಿಗೆ ಬೇಸರಪಡಿಸಬಾರದೆಂದು, ಇಷ್ಟು ವರ್ಷಗಳ ಕಾಲ ಸುಮ್ಮನಿದ್ದರು ರಾಮನ್ ಕುಟ್ಟಿ ನಾಯರ್.

ಟ್ಯಾಕ್ಸಿ ಕಳುಹಿಸಿದ ಅನಂತರ ರಾಮನ್ ಕುಟ್ಟಿ ನಾಯರ್ ಗೇಟು ದಾಟಿ ಕೆರೆದಂಡೆಗೆ ಹೋದರು. ಕೈಕಾಲು ಮುಖಗಳನ್ನೆಲ್ಲಾ ತೊಳೆದ ಅನಂತರ ರಮಣಿಯೊಂದಿಗೆ ಊಟಕ್ಕೆ ಕೂರೋಣ ಎಂದುಕೊಂಡರು. ಕೆರೆಯ ದಡದಲ್ಲಿ ಹಿಂಗಾಲಿಗೆ ಎಣ್ಣೆ ಹಚ್ಚುತ್ತಾ ಕುಳಿತಿದ್ದಳು ಕೆಲಸದ ಅಮ್ಮಿಣಿ. ಅವಳ ನಗ್ನವಾದ ಹಿಂಗಾಲುಗಳನ್ನು ಕಂಡಾಗ ರಾಮನ್ ಕುಟ್ಟಿ ನಾಯರ್ ಹಿಂದೆ ಸರಿದು ನಿಂತರು.

''ಬನ್ನಿ ಯಜಮಾನರೆ, ನಾನೇ ದೂರ ಹೋಗ್ತಿನಿ'' ನಿಸ್ಸಂಕೋಚವಾಗಿ ಹೇಳಿದಳು.

''ಅಮ್ಮಣಿ, ನಿನ್ನನ್ನು ಒಂದು ವಿಷಯ ಕೇಳ್ತೀನಿ, ನಿಜ